ನಿಯಮ 334ರ ಮೇರೆಗೆ.

ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿನಲ್ಲಿ ದೇವಾಲಯಕ್ಕೆ ಹೊಂದಿಕೊಂಡಿರುವ ಜಮೀನಿನಲ್ಲಿ ಸಮುದಾಯ ಭವನ ಇತ್ಯಾದಿಗಳಿಗೆ ಮೀಸಲಿಡುವ ಬಗ್ಗೆ

ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):– ಮಾನ್ಯ ಅಧ್ಯಕ್ಷರೇ ದಕ್ಷಿಣಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕು ವಾರಂಬಳ್ಳಿ ಗ್ರಾಮದಲ್ಲಿರುವ ಸಾಲಿಕೇರಿಯಲ್ಲಿನ ಶ್ರೀ ಬ್ರಹ್ಮಲಿಂಗ ವೀರಭದ್ರ ದುರ್ಗಾಪರಮೇಶ್ವರಿ ದೇವಾಲಯಕ್ಕೆ ಹೊಂದಿಕೊಂಡಂತೆ ಇರುವ ಸರಕಾರಿ ಭೂಮಿಯನ್ನು ಹಾರಾಡಿ ಗ್ರಾಮದ ಸರ್ವೆ ನಂಬರ್ 35–1 ಸ್ಮಶಾನ ಸ್ಥಳವಾಗಿ ಮಾರ್ಪಡಿಸಿರುವ ಕಾರಣ ಸದರಿ ದೇವಸ್ಥಾನದ ಪಾವಿತ್ರ್ಯತೆಗೆ ಧಕ್ಕೆ ಬರುವುದೆಂಬ ಕಾರಣಕ್ಕಾಗಿ ಆ ಸ್ಥಳದಲ್ಲಿ ರುದ್ರಭೂಮಿಯನ್ನು ಮಾಡುವ ಕಾರ್ಯವನ್ನು ಕೈಬಿಡಬೇಕೆಂದು ಅಲ್ಲಿಯ ಸ್ಥಳೀಯ ಭಕ್ತಾದಿಗಳು ಸರಕಾರವನ್ನು ಕೇಳಿಕೊಂಡಿದ್ದಾರೆ. ಆದಕಾರಣ ಯೋಜಿತ ರುದ್ರಭೂಮಿಯನ್ನು ಆ ಸ್ಥಳದಲ್ಲಿ ಮಾಡದೇ ಬೇರೆ ಸೂಕ್ತ ಸ್ಥಳವನ್ನು ಆದಕ್ಕೆ ಗೊತ್ತುಪಡಿಸಿ ಸದರಿ ಜಾಗವನ್ನು ಸಮುದಾಯ ಭವನ ಇತ್ಯಾದಿ ಕಾರ್ಯಕ್ರಮಗಳಿಗಾಗಿ ಮೀಸಲಿಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕು ವಾರಂಬಳ್ಳಿ ಗ್ರಾಮದಲ್ಲಿರುವ ಸಾಲಿಕೇರಿಯಲ್ಲಿನ ಶ್ರೀ ಬ್ರಹ್ಮಲಿಂಗ ವೀರಭದ್ರ ದುರ್ಗಾಪರಮೇಶ್ವರಿ ದೇವಾಲಯಕ್ಕೆ ಹೊಂದಿಕೊಂಡಿರುವ ಹಾರಾಡಿ ಗ್ರಾಮದ ಸರ್ವೆ ನಂ.35: 1 ರ ಪೈಕಿ 50 ಸೆಂಟ್ಸ್ ಸರ್ಕಾರಿ ಭೂಮಿಯನ್ನು ಸ್ಮಶಾನಕ್ಕಾಗಿ ಮೀಸಲು ಇಡಲು ಯೋಚಿಸಲಾಗಿತ್ತು. ಸದರಿ ದೇವಾಲಯಗಳ ಆಡಳಿತ ಮಂಡಳಿಯ ಹಾಗೂ ಸಾರ್ವಜನಿಕರ ಆಕ್ಷೇಪಣೆಗಳನ್ನು ಪರಿಗಣಿಸಿ ಈ ಪ್ರಸ್ತಾವನೆಯನ್ನು ಕೈಬಿಟ್ಟು ಸ್ಮಶಾನಕ್ಕಾಗಿ ಬೇರೆ ಸೂಕ್ತ ಸ್ಥಳವನ್ನು ಆಯ್ಕೆ ಮಾಡಲು ಉಡುಪಿ ತಹಶೀಲದಾರರಿಗೆ ಜಿಲ್ಲಾಧಿಕಾರಿಗಳು ಅವರ ಕಚೇರಿ ಪತ್ರದ ಸಂಖ್ಯೆ ಎಸ್ಎನ್ಡಿ 1 ಪಿಡಿಆರ್ 1040:92–93 ದಿನಾಂಕ 22–2–93ರ ಪ್ರಕಾರ ನಿರ್ದೇಶನ ನೀಡಿರುತ್ತಾರೆ. ಆದುದರಿಂದ, ಈಗ ಈ ಸಮಸ್ಯೆಯು ಬಗೆಹರಿದಂತಾಗಿದೆ.

1.40 ಪಿ.ಎಂ.

2. ಕಲಬೆರಕೆ ಹಾಲು ಮಾರುವ ಬೂತ್‌ಗಳ ವಿರುದ್ಧ ಕ್ರಮ

ಶ್ರೀ ಆರ್. ದಯಾನಂದರಾವ್ (ಗಾಂಧಿನಗರ):– ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಶ್ರೀರಾಮಪುರದಲ್ಲಿರುವ ಬಲ್ಕ್‌ವೆಂಡಿಂಗ್ ಬೂತ್ ನಂ: 31ರಲ್ಲಿ ಕಲಬೆರಕೆ ಹಾಲಿನ ಮಾರಾಟಕ್ಕಾಗಿ ಮದರ್ ಡೈರಿಯವರು ಹಲವಾರು ಬಾರಿ ನೋಟೀಸುಗಳನ್ನು ನೀಡಿದ್ದರೂ ಇದರ ವಿಜೆನ್ಸಿಯನ್ನು ರದ್ದುಪಡಿಸಲು ಇದುವರೆವಿಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಚೆಕ್ ಬೌನ್ಸಿಂಗ್ ಪ್ರಕರಣದಲ್ಲಿಯೂ ಸಹ ಹಲವಾರು ಬಾರಿ ನೋಟೀಸುಗಳನ್ನು ನೀಡಲಾಗಿವೆ. ಇನ್ನೂ ಕೂಡ ಕಲಬೆರಕೆ ನಡೆಯುತ್ತಿರುವುದಾಗಿ ಸಾರ್ವಜನಿಕ ದೂರುಗಳು ಬಂದಿರುತ್ತವೆ. ಆದ್ದರಿಂದ ಕೂಡಲೆ ಹಠಾತ್ತಾಗಿ ಈ ಮೇಲ್ಕಂಡ ಬೂತಿಗೆ ಸಂಬಂಧಪಟ್ಟ ಅಧಿಕಾರಿಗಳು ಭೇಟಿ ನೀಡಿ ಹಳೆಯ ಪ್ರಕರಣಗಳ ಬಗ್ಗೆ ತನಿಖೆ ನಡೆಸಿ ಈ ವಿಜೆನ್ಸಿಯನ್ನು ನಿರ್ದಾಮಂತ ನಿರುದ್ಯೋಗಿಗಳಿಗೆ ಕೊಡಲು ಕ್ರಮ ಕೈಗೊಳ್ಳಬೇಕೆಂದು ಸನ್ಮಾನ್ಯ ಪಶುಸಂಗೋಪನಾ ಸಚಿವರನ್ನು ಕೋರುತ್ತೇನೆ.

ಶ್ರೀ ಕೆ. ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾತೃ

ಡೈರಿಯ ಅಧೀನದಲ್ಲಿರುವ ಶ್ರೀರಾಮಪುರದಲ್ಲಿರುವ ಬಲ್ಕ್ ವೆಂಡಿಂಗ್ ಬೂತ್ ಸಂಖ್ಯೆ. 318ರಲ್ಲಿ ಪ್ರಾರಂಭದಿಂದ ಇಲ್ಲಿಯವರೆಗೆ 6 ಕಲಬೆರಕೆ ಹಾಗೂ 138 ಬಾರಿ ಚೆಕ್ ಬೌನ್ಸ್ ಪ್ರಕರಣಗಳು ಆಗಿರುತ್ತವೆ. ಈ ಹಿಂದೆ ಕಲಬೆರಕೆ ಮತ್ತು ಚೆಕ್ ಬೌನ್ಸ್ ಪ್ರಕರಣಗಳು ಆದಲ್ಲಿ ಏಜೆನ್ಸಿಗಳಿಗೆ ಎಚ್ಚರಿಕೆ ನೀಡಲಾಗುತ್ತಿತ್ತು. ಚೆಕ್ ಬೌನ್ಸ್ ಪ್ರಕರಣಗಳಿಗೆ ಪ್ರತಿ ಬಾರಿಯೂ ರೂ. 100ದಂಡ ವಿಧಿಸಲಾಗುತ್ತಿತ್ತು. ಈ ಪ್ರಕರಣಗಳ ಸಂಖ್ಯೆ ಜಾಸ್ತಿಯಾದ್ದರಿಂದ ಇದನ್ನು ತಡೆಗಟ್ಟಲು ದಿನಾಂಕ 21–10–92ರಂದು ನಡೆದ ಮಾತೃ ಡೈರಿಯ ವ್ಯವಸ್ಥಾಪಕ ಸಮಿತಿ ಸಭೆಯಲ್ಲಿ ತೀರ್ಮಾನಿಸಿದಂತೆ ಕಲಬರಕೆ ಮಾಡಿದಂತಹ ಏಜೆನ್ಸಿಗಳಿಗೆ ಮೊದಲನೇ ಬಾರಿಗೆ ರೂ. 2000 ದಂಡ ವಿಧಿಸುವುದು ಹಾಗೂ ಎರಡನೇ ಬಾರಿ ಕಲಬೆರಕೆ ಕಂಡು ಬಂದಲ್ಲಿ ಏಜೆನ್ಸಿ ರದ್ದುಪಡಿಸಲಾಗುವುದು. ಈ ತೀರ್ಮಾನದನ್ವಯ ಶ್ರೀ ರಾಮಪುರದ 318ನೇ ಬೂತಿನಲ್ಲಿ ಒಂದು ಬಾರಿ ಕಲಬೆರಕೆ ಪ್ರಕರಣ ಪತ್ತೆಯಾಗಿದ್ದು, ರೂ.2000–00 ದಂಡ ವಿಧಿಸಲಾಗಿದೆ. ಸದರಿ ಏಜೆನ್ಸಿಯವರು ಈ ದಂಡದ ಹಣವನ್ನು ಪಾವತಿ ಮಾಡದೇ ಇದ್ದು ಇದನ್ನು ಅವರ ಭದ್ರತಾ ಠೇವಣಿಯಲ್ಲಿ ಮುರಿದುಕೊಳ್ಳಲಾಗುವುದು. ದಿನಾಂಕ 11–1–1993ರಂದು ನಡೆದ ಮಾತೃ ಡೈರಿಯ ವ್ಯವಸ್ಥಾಪಕ ಸಮಿತಿ ಸಭೆಯಲ್ಲಿ ದಿನಾಂಕ 21–10–92ರಂದು ತೆಗೆದುಕೊಂಡ ತೀರ್ಮಾನವನ್ನು ಪುನರ್ ಪರಿಶೀಲಿಸಿ ಕಲಬೆರಕೆಯನ್ನು ಮೊದಲನೆ ಪ್ರಕರಣದಲ್ಲಿಯೇ ಏಜೆನ್ಸಿಯನ್ನು ರದ್ದುಪಡಿಸಲು ತೀರ್ಮಾನಿಸಲಾಗಿದೆ. ಈ ತೀರ್ಮಾನದಂತೆ ನವೆಂಬರ್ 1992ರಿಂದ ಇಲ್ಲಿಯವರೆವಿಗೆ 20 ಏಜೆನ್ಸಿಗಳನ್ನು ಕಲಬೆರಕೆ ಕಾರಣಗಳಿಂದ ರದ್ದು ಪಡಿಸಲಾಗಿದೆ. ಶ್ರೀರಾಮಪುರದ ಬೂತ್ ಸಂಖ್ಯೆ: 318ರಲ್ಲಿ ಮತ್ತೆ ಕಲಬೆರಕೆ ಪ್ರಕರಣ ಪತ್ತೆಯಾದಲ್ಲಿ ದಿನಾಂಕ 11–1–1993ರ ತೀರ್ಮಾನದನ್ವಯ ಏಜೆನ್ಸಿಯನ್ನು ರದ್ದು ಮಾಡಲಾಗುವುದು. ಸದರಿ ಬೂತಿನ ಚೆಕ್ ಬೌನ್ಸಿಂಗ್ ಪ್ರಕರಣಗಳಿಗೆ ಚೆಕ್ ಬೌನ್ಸಿಂಗ್ ಪ್ರಕರಣಗಳೂ ಸಹ ಆದಲ್ಲಿ ಏಜೆನ್ಸಿ ರದ್ದುಪಡಿಸುವ ವಿಚಾರವೂ ಸಹ ಪರಿಶೀಲನೆಯಲ್ಲಿದೆ. ದಿನಾಂಕ 11–1–1993 ರಂದು ಮಾತೃ ಡೈರಿಯ ವ್ಯವಸ್ಥಾಪಕ ಸಮಿತಿ ಸಭೆಯ ತೀರ್ಮಾನದಂತೆ ಶ್ರೀರಾಮಪುರದ 318 ಬೂತಿನಲ್ಲಿ ಕಲಬೆರಕೆ ಪ್ರಕರಣ ಪತ್ತೆಯಾದಲ್ಲಿ ತಕ್ಷಣವೇ ಏಜೆನ್ಸಿಯನ್ನು ರದ್ದುಪಡಿಸಿ ನಿಯಮಾನುಸಾರ ಹೊಸ ಏಜೆನ್ಸಿಯನ್ನು ನೇಮಿಸಲಾಗುವುದು.

3. ಪ್ರೇರಕ–ಪ್ರೇರಕಿಯರಿಗೆ ಗೌರವ ಧನದಲ್ಲಿ ಹೆಚ್ಚಳ

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಸರ್ಕಾರವು ವಿಶ್ವಬ್ಯಾಂಕಿನ ನೆರವಿನೊಂದಿಗೆ ಕರ್ನಾಟಕ ರಾಜ್ಯದಲ್ಲಿ ಸಾಮಾಜಿಕ ಅರಣ್ಯ ಯೋಜನೆಯೊಂದನ್ನು 1984ರಲ್ಲಿ ಸ್ಥಾಪಿಸಿ, ಆ ಯೋಜನೆಯಡಿಯಲ್ಲಿ 1500 ಮತ್ತು ಜವಾಹರ್ ರೋಜ್ಗಾರ್ ಯೋಜನೆಯಡಿಯಲ್ಲಿ 356ಕ್ಕೂ ಹೆಚ್ಚು ಪ್ರೇರಕ: ಪ್ರೇರಕಿಯರನ್ನು ಎಲ್ಲಾ ವಿಧಿವಿಧಾನಗಳ ಮೂಲಕ ನೇಮಿಸಿಕೊಂಡಿದೆ. ಆದರೆ ಅವರಿಗೆ ಸಿಕ್ಕುವ ಗೌರವಧನದಿಂದ ಇಂದಿನ ಕಾಲದಲ್ಲಿ ಜೀವನ ನಿರ್ವಹಿಸಲು ಕಷ್ಟವಾಗಿದೆ. ಏಕೆಂದರೆ ಅತ್ಯಾವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರಿವೆ. ಅಲ್ಲದೆ ಇವರ ಹುದ್ದೆಗಳನ್ನು ಖಾಯಂ ಸಹ ಮಾಡಿರುವುದಿಲ್ಲ. ಆದ್ದರಿಂದ ಈ ವಿಷಯದ ಬಗ್ಗೆ ಮಾನ್ಯ ಅರಣ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

† ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ಹೇಳಿಕೆಯನ್ನು ನೀಡುತ್ತೇನೆ.

1. ಕರ್ನಾಟಕ ರಾಜ್ಯದಲ್ಲಿ ವಿಶ್ವಬ್ಯಾಂಕ್ ಮತ್ತು ಸಾಗರೋತ್ತರ ಅಭಿವೃದ್ಧಿ ಪ್ರಾಧಿಕಾರದ ಸಾಮಾಜಿಕ ಅರಣ್ಯ ಯೋಜನೆ 1983ರಿಂದ ಅನುಷ್ಠಾನಗೊಂಡು ಮಾರ್ಚ್ 31, 1992ಕ್ಕೆ ಮುಕ್ತಾಯಗೊಂಡಿತು. ಈ ಯೋಜನೆಯಡಿಯಲ್ಲಿ 1,468 ಜನ ಅರಣ್ಯ ಪ್ರೇರಕರು ಅಂಶಕಾಲಿಕ ಕೆಲಸಗಾರರಾಗಿ ತಿಂಗಳಿಗೆ